ತಾರೀಖು 21ನೇ ಆಗಸ್ಟು 1884.

ನಂ. 126.—ಈಚಿಗೆ ಹಾಸನ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟ ಮಾಜಿ ಅರಕಲ್‌ಗೂಡು ತಾಲ್ಲೂಕಿನ ಕೆಲವು ಚಿಲ್ಲರೇ ಗ್ರಾಮಗಳು ಅವುಗಳ ಬಾಜೂದಲ್ಲಿನ ಗ್ರಾಮಗಳಿಗೆ ಸೇರಿಸಲ್ಪಟ್ಟಿರುವದನ್ನು ತೋರಿಸುವ ಇದರಡೀ ಕಂಡ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ:—

ತಾಲ್ಲೂಕಿನ ಹೆಸರು.	ನಂಬರು.	ಕಾಯಂಮಾಡಲ್ಪಟ್ಟ ಗ್ರಾಮಗಳು.	ನಂಬರು.	ಶೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಹಾಸನ	1	ರಾಮನಹಳ್ಳಿ ..	1	ಗುಡಬೊಮ್ಮನಹಳ್ಳಿ	
	2	ಭಕ್ತರವಳ್ಳಿ (ಮಾರವೇ ಭರಕಾ) ..	1	ಮ್ಯಾಯಿಗೊಂಡನಹಳ್ಳಿ	
	3	ಕೊಡಗಟ್ಟವಳ್ಳಿ ..		..	ಭರತೂರಿಗೆ ಶೇರಿದ ಈ ಎರಡು ದಾಖಲೆ ಗ್ರಾಮಗಳು ಮೂಲೆ ತಾಕಾಗಿರುವದರಿಂದ ಈ ಎರಡೂ ಬೇರೇ ಗ್ರಾಮಗಳಾಗಿರತಕ್ಕದ್ದು, ಅಸಲೀ ಭರತೂರಿಗೆ ಶೇರತಕ್ಕದ್ದಲ್ಲ.
	4	ಕಟ್ಟೇ ಹೊಸೂರು ..		..	
	5	ಹಂಜಲಿಗೆ ..	1	ಮೂಲಗೊಂಡನಹಳ್ಳಿ	
	6	ಮೂದಿಹಳ್ಳಿ ..	1	ಭಕ್ತರವಳ್ಳಿ (ಬೇಚಿರಾಖ)	
	7	ಚಿಕ್ಕನಹಳ್ಳಿ ..	1	ಬುಕ್ಕಾಪುರ	
	8	ಅಮಲೆಪುರ ..	1	ಮಲ್ಲೇನಹಳ್ಳಿ	
ಹಾಳ್ಯ	9	ವಲಗರಹಳ್ಳಿ ..	1	ಪಾಯಿಂಣನಹಳ್ಳಿ	
ಕಾಟ್ಯ	10	ದೆನಿಹಳ್ಳಿ ..	1	ಮೂಡ್ಲಚಿಕ್ಕನಹಳ್ಳಿ	
	11	ಮುಂಚನಹಳ್ಳಿ ..	1	ಪಡ್ಡುಚಿಕ್ಕನಹಳ್ಳಿ	

ತಾರೀಖು 2ನೇ ಸೆಪ್ಟಂಬರ್ 1884.

ನಂ. 133.—ಮೈಸೂರು ಷಹರಿನ ಇದರಡೀ ಕಂಡ ಚಕ್ಕುಬಂದಿ ವಿವರಣೆಯು, ದಿರ್ವಾರವರಿಂದ ಮಂಜೂರ್ಮಾಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ :—

ಸರಹದ್ದುಲೈನು, ಮೈಸೂರು–ಶ್ರೀರಂಗಪಟ್ಣದ ರಸ್ತೆಯ 86ನೇ ಮೈಲಿಯ 6ನೇ ಫರಲಾಂಗಿನಲ್ಲಿರುವ ಶೇತುವೆಯ ಮಧ್ಯಭಾಗದಿಂದ ಉತ್ತರಕ್ಕೆ 500 ಅಡಿಗಳ ದೂರದ ಮೊದಲು ಪೂರ್ವ ದಿಕ್ಕಿಗಾಗಿ ತೋಟಗಳ ಮೂರ್ಗವಾಗಿ ದಾರಿಯು ಉತ್ತರ ದಿಕ್ಕಿಗೆ ವ್ಯಾಪಿಸಿ, ನೀರು ಹರಿಯುವ ಹಳ್ಳದ ಮಧ್ಯದ ವರಿವಿಗೂ ಸುಮಾರು 300 ಅಡಿಗಳ ತನಕ ಹೋಗಿ, ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಣದ ಹಳೆರಸ್ತೆಯನ್ನು ಯರಡು ಕಾಲುದಾರಿಗಳು ಸೇರುವ ಕಡೆ ಸಂಧಿಸುತ್ತದೆ. ಶ್ರೀರಂಗಪಟ್ಣದ ಹಳೇ ರಸ್ತೆಯಲ್ಲಿರುವ ಈ ಗುರ್ತು ಆರಂಭಿಸಿ ಸರಹದ್ದು ಲೈನು, ನಿರಖುತಿ ದಿಕ್ಕಿಗಾಗಿ ನೆಟ್ಟಗೆ ಹೊರಟು "ಗೋಣೀವರದ" ತೋಪಿನ ಈಶಾನ್ಯ ದಿಕ್ಕಿಗೆ 20 ಅಡಿಗಳ ದೂರದಲ್ಲಿರುವ ದಮನೂರು ಕೆರೆ ರಸ್ತೆಯಲ್ಲಿ ಗುರ್ತು ಮಾಡಿರುವ ಸ್ಥಳದ ವರಿಗೆ ವ್ಯಾಪಿಸುತ್ತದೆ, ತೋಪಿನಿಂದ ನೆಟ್ಟಗೆ ಹೊರಟು ನವಾಬರ ಭಾವಿಯ ಈಶಾನ್ಯ ದಿಕ್ಕಿನ ಕೊನೆಗೆ 20 ಅಡಿಯಲ್ಲಿರುವ ಗುರ್ತಿನ ವರಿಗೆ ಹೋಗುತ್ತದೆ.

ಸರಹದ್ದುಲೈನು, ನವಾಬರ ಭಾವಿಯಿಂದ ನೆಟ್ಟಗೆ ಹೊರಟು ಕಾಮಮ್ಮನಹಳ್ಳಿಗೆ ಹೋಗುವ ಕೇಳುಬಾರಿಯು ಕಾರಂಜೇಕೆರೆ ಕಾಲವೆಯನ್ನು ಬಿಡುವ ವರಿಗೆ ಹೋಗುತ್ತದೆ. ಅನಂತರ ನೆಟ್ಟಗೆ ಕೋಟೆಯ ಹಳೇ ಖಂದಕದ ಕೊನೆ ವರಿವಿಗೂ ಹೋಗಿ ಅಲ್ಲಿಂದ ಪೂರ್ವದಿಕ್ಕಿಗಾಗಿ ಕೋಟೆ ಖಂದಕದ ಸುತ್ತಲೂ ಈಶಾನ್ಯ ದಿಕ್ಕಿನ ಕೊನೆ ವರಿವಿಗೂ ವ್ಯಾಪಿಸುತ್ತದೆ.

ಸದರೀ ಹಳೇಕೋಟೆಯ ಈಶಾನ್ಯ ದಿಕ್ಕಿನ ಕೊನೆ ಮೊದಲುಗೊಂಡು, ಸರಹದ್ದು ಲೈನು, ಶುದ್ಧ ದಕ್ಷಿಣಕ್ಕಾಗಿ ಸುಮಾರು 920 ಅಡಿಗಳ ವರಿವಿಗೂ ವ್ಯಾಪಿಸಿ ಅನಂತರ ನೆಟ್ಟಗೆ ಒನ್ನೂರು ರಸ್ತೆಯಲ್ಲಿ ಸದರೀ ರಸ್ತೆಯು ಚಾಮುಂಡೀ ಬೆಟ್ಟದ ರಸ್ತೆಗೆ ಸೇರುವ ಸ್ಥಳ

ದಿಂದ ಪೂರ್ವ ದಿಕ್ಕಿಗೆ 290 ಅಡಿಗಳ ವರಿವಿಗೆ ವ್ಯಾಪಿಸುತ್ತದೆ. ಈ ಅಳತೆಯು ರಸ್ತೆಗಳ ವಳ ಚರಂಡಿಗಳು ಕೂಡುವ ಸ್ಥಳದಿಂದ ತೆಗೆಯಲ್ಪಟ್ಟು ಯಿದೆ.

ಸರಹದ್ದು ಲೈನು, ಚಾಮುಂಡೀಪಟ್ಟದ ರಸ್ತೆಯನ್ನು ಕೇರಿ ಅದರ ಪೂರ್ವ ಭಾಗಕ್ಕಾಗಿ ಉದ್ದಕ್ಕೆ ಹೊರಟು ಕುಂಬಾರಹಳ್ಳಿ ಗ್ರಾಮವನ್ನು ಸುತ್ತಿಕೊಂಡು ಸದರೀ ರಸ್ತೆಯು ಕಾರಂಜೀ ಕೆರೆ ರಸ್ತೆಗೆ ಕೂಡುವ ಬಳಿ ಬಂದು ಕೇರುತ್ತೆ.

ಅನಂತರ ಸರಹದ್ದು ಲೈನು, ಕಾರಂಜೀಕೆರೆ ರಸ್ತೆಮತ್ತು ಕುದುರೆ ಜಾಜಿನ ಬೋರೆ ರಸ್ತೆ ಇವುಗಳ ದಕ್ಷಿಣಕ್ಕಾಗಿ ಹೊರಟು, ಗೊಬ್ಬಿಕೆರೆ ತಲಾವಿನ ಯೇರಿ ಮೇಲುಭಾಗಕ್ಕಾಗಿ ಚಾಮುಂಡೀ ಪಟ್ಟದ ರಸ್ತೆಯಬಳಿ ಕಾಲ್ವೆ ದಾಟುವ ಸ್ಥಳದ ವರಿಗೆ ವ್ಯಾಪಿಸುತ್ತೆ; ಅನಂತರ ರಸ್ತೇ ಮಾರ್ಗವಾಗಿ ಗಾಸಪ್ಪ ತೊಗಚಿ ಮಠವನ್ನ ಕೇರಿಸಿಕೊಂಡು ದೊಡ್ಡಕೆರೆ ತಲಾವಿನ ಹೆಚ್ಚಿಗೆ ನೀರು ಹರಿದು ಹೋಗುವ ಕಾಲ್ವೆಯ ದಕ್ಷಿಣಕ್ಕೆ 235 ಅಡಿಗಳ ದೂರದಲ್ಲಿ ಮೈಸೂರು-ನಂಜನಗೂಡು ರಸ್ತೆಯನ್ನು ಸಂಧಿಸುತ್ತದೆ. ಈ ಗುರ್ತು 89ನೇ ಮೈಲಿಯ 8ನೇ ಫರ್ಲಾಂಗಿನಲ್ಲಿರುತ್ತೆ.

ಸರಹದ್ದು ಲೈನು, ಅನಂತರ ತೋಟಗಳ ಮಾರ್ಗವಾಗಿ ಸೊಟ್ಟ ಸೊಟ್ಟಾದ ದಾರಿಯನ್ನು ಅನುಸರಿಸಿ ಹೋಗುತ್ತದೆ. ಸದರೀದಾರಿ ಯಾವತ್ತೂ ನಕ್ಷೆಯಲ್ಲಿ ಕಾಣಿಸಿ ಯಿರುವದಿಲ್ಲ, ಮತ್ತು ಸರಹದ್ದು ಲೈನು, ಹಾಗೆಯೇ ಹೊರಟು 89ನೇ ಮೈಲಿಯ 7ನೇ ಫರ್ಲಾಂಗು ಕಲ್ಲಿನಿಂದ 160 ಅಡಿಗಳ ದೂರದಲ್ಲಿ ಹಳೇ ಅಗ್ರಹಾರದ ರಸ್ತೆಯನ್ನು ಸಂಧಿಸುತ್ತದೆ.

ಸರಹದ್ದು ಲೈನು, ಅನಂತರ ನೆಟ್ಟಗೆ ದೊಡ್ಡಕೆರೆ ಕಾಲ್ವೆ ಕೊನೆವರಿಗೂ ಹೋಗಿ, ನೀರು ಕಾಲ್ವೆಯ ಪಶ್ಚಿಮ ಭಾಗಕ್ಕೂ, ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತಲೂ ಯಿರುವ ಕೀಳುದಾರಿಯ ದಕ್ಷಿಣದಿಕ್ಕಿಗೂ, ಮತ್ತು ಕೀಳುದಾರಿಯು ನೀರು ಸರಬರಾಯಿ ಆಗುವ ಕಾಲ್ವೆಯನ್ನು ಸಂಧಿಸುವ ಸ್ಥಳದ ಪಶ್ಚಿಮ ಭಾಗಕ್ಕೂ ಉದ್ದಕ್ಕೆ ಹೊರಟು, ಕೊರಕಲು ರಸ್ತೆಯ ಮೇಲ್ಭಾಗದಲ್ಲಿ ಸದರೀ ದೊಡ್ಡ ಕೆರೆ ಕಾಲ್ವೆಯ ಕೆಳ ಕಟ್ಟೆಯನ್ನು ಅನುಸರಿಸುತ್ತದೆ, ಅನಂತರ ಕಾಲ್ವೆ ಭೂಮಿಯ ಸರಹದ್ದನುಸರಿಸಿ ಸ್ವಲ್ಪ ದೂರದವರಿವಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಡಿಸ್ಟಿಲೇರಿ ಯಾನೆ ಭಟ್ಟಿಮನೆಯನ್ನ ಪೂರ್ವಭಾಗಕ್ಕೆ ಬಿಟ್ಟು ಕೂಕರಹಳ್ಳಿ ಕೆರೆಯ ಹಿಂಭಾಗದ ರಸ್ತೆಗೆ ಹೋಗಿ ಕೇರುತ್ತದೆ.

ಸರಹದ್ದು ಲೈನು, ಅನಂತರ ಕೂಕರಹಳ್ಳಿ ಕಾಲ್ವೆಯ ಪಶ್ಚಿಮಭಾಗಕ್ಕೆ 60 ಅಡಿಗಳವರಿಗೂ ನೆಟ್ಟಗೆ ಹೋಗುತ್ತದೆ, ಅನಂತರ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ-ಬಳಿಯಣ ಹಳೇರಸ್ತೆ ಮತ್ತು ಹೊಸರಸ್ತೆ ಇವೆರಡೂ ಕೇರುವ ಸ್ಥಳದ ಪೂರ್ವಭಾಗಕ್ಕೆ 245 ಅಡಿಗಳ ವರಿಗೂ ಹೋಗುತ್ತದೆ, ಅನಂತರ ಪಡುವಾರಹಳ್ಳಿ ಸುತ್ತಿಕೊಂಡು ಸದರೀ ಗ್ರಾಮದ ಪಶ್ಚಿಮ ಭಾಗಕ್ಕಾಗಿ ಉದ್ದಕ್ಕೆ ಜೀವಣರಾಯರ ಕೆರೆ ಕಾಲ್ವೆವರಿಗೂ ಹೋಗಿ ಧನ್ನೀಕಟ್ಟೆ ಕಾಲ್ವೆಯ ಉತ್ತರ ಭಾಗದ ಕಟ್ಟೆಯ ಅನುಸರಿಸಿ ಹಳ್ಳೀರಸ್ತೆಯ ಪಶ್ಚಿಮ ಭಾಗಕ್ಕಾಗಿ ಹುಂಡೀಹಳ್ಳದ ವರಿಗೂ ವಿಸ್ತರಿಸುತ್ತದೆ; ಅಲ್ಲಿಂದ ಹುಂಡೀಹಳ್ಳ ಅನುಸರಿಸಿ ರೈಲ್ ಕೇತುವೆ ಮಾರ್ಗವಾಗಿ ಪೂರ್ಣಯ್ಯನವರ ಕಾಲ್ವೆಗೆ ಪಶ್ಚಿಮ ಭಾಗಕ್ಕಾಗಿ ಬಳಗುಳದ ರಸ್ತೆಯಲ್ಲಿರುವ ಜೋಡೀ ತೆಂಗಿನ ಮರದ ಕೇತುವೆವರಿಗೂ ವ್ಯಾಪಿಸುತ್ತದೆ; ಅಲ್ಲಿಂದ ರಸ್ತೆಯ ಉತ್ತರದಿಕ್ಕಿಗಾಗಿ ಕೊನೆವರಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ರಸ್ತೆಯಲ್ಲಿ ಸರಹದ್ದು ಲೈನ್ ಆರಂಭವಾಗಿದ ಸ್ಥಳಕ್ಕೆ ಬಂದು ಕೇರುತ್ತದೆ.

ತಾರೀಖು 5ನೇ ಸೆಪ್ಟಂಬರ್ 1884.

ನಂ. 134.—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಸೈಯ್ಯದ್ ನಸೀರುದ್ದೀಯವರು, 1884ನೇ ಇಸವಿ ಆಗಸ್ಟು 25ನೇ ಮಕ್ಕಿಮಿನ ಪೂರ್ವಾನ್ವದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ವ ಟೈಜರಿ ಆಫೀಸು ಚಾರ್ಜನ್ನು, ಡೆಪ್ಯುಟಿ ಕಮಿಷನರ್ ಮೆ||. ಮೈಕಲ್‌ಜರ್ಕಾಯವರಿಗೆ ವೊಪ್ಪಿಸಿ ಇರುತ್ತಾರೆ.

ನಂ. 135.—ಬೆಂಗಳೂರು ಸರ್ಕಾಡಿನೇಟ್ ಜಡ್ಜ್ ಮೆ|| ಸಿ. ಕೈಸಯವರಿಗೆ, 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 3ನೇ ಸೆಕ್ಷನ್ ಅನುಸರಿಸಿ ಸದರೀ ಆಕ್ಟ್ ಪ್ರಕಾರ ಒಬ್ಬ ಜಡ್ಜೀಯ ಅಧಿಕಾರಗಳು ಅವರ ಅಧಿಕಾರದ ಸ್ಥಳ ಸರಹದ್ದಿನಲ್ಲಿ ಅವರಿಂದ ಚಲಾಯಿಸಲ್ಪಡುವ ಬಗ್ಗೆ, ಕೊಡಲ್ಪಟ್ಟು ಇರುತ್ತವೆ.

ಬಮೋಜೀಬ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.